ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ. ತಳವಾರ ಸಾಬಣ್ಣ
**ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಸರ್ಕಾರದ ಹೇಳಿಕೆ.**

ವಿಷಯ: -

ಉನ್ನತ ಶಿಕ್ಷಣ ಶೈಕ್ಷಣಿಕ ಚಟುವಟಿಕೆಗಳ ಮೂಲಕ ಪ್ರಸಿದ್ಧವಾಗಬೇಕಿದ್ದ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ವಾಮಾಚಾರದಂತ ಕೃತ್ಯದಿಂದ ಸುದ್ದಿಯಾಗಿರುವುದು ದುರಾದೃಷ್ಟ. ಡಾ. ರಮಾ ಜಿ. ಗುಂಡುರಾವ್ ಅವರು ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಶಾಸನಶಾಸ್ತ್ರ ಅಧ್ಯಯನ ವಿಭಾಗದಲ್ಲಿ 9 ವರ್ಷಗಳಿಂದ ಸಹಾಯಕ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅನಾರೋಗ್ಯದ ಕಾರಣದಿಂದ ರಜೆ ಮೇಲಿದ್ದ ಡಾ. ರಮಾ ಅವರು ಡಿಸೆಂಬರ್ 01 ರಂದು ಕರ್ತವ್ಯಕ್ಕೆ ವಾಪಸ್ ಆಗಿ ಕೊಠಡಿ ಬಾಗಿಲು ತೆಗೆದಾಗ ಮೇಜಿನ ಮೇಲೆ ನಿಂಬೆಹಣ್ಣು, ಕಪ್ಪು ಬಣ್ಣದ ಗೊಂಬೆ, ಕುಂಕುಮ, ಅರಿಶಿಣ ಇದ್ದವು, ಡಾ. ರಮಾ ಅವರು ಕೊಠಡಿಯಲ್ಲಿ ವಾಮಾಚಾರ ನಡೆದಿದ್ದನ್ನು ಕಂಡು ಭಯಗೊಂಡು ಈ ಬಗ್ಗೆ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಪೊಲೀಸರಿಗೆ ದೂರನ್ನು ಸಲ್ಲಿಸಿದ್ದಾರೆ ಎಂದು ಸಂಯುಕ್ತ ಕರ್ನಾಟಕ ಮತ್ತು ರಾಜ್ಯ ಮಟ್ಟದ ಪತ್ರಿಕೆಯಲ್ಲಿ ವರದಿಯಾಗಿದೆ. ಕೊಠಡಿಯನ್ನು ಖಾಲಿ ಮಾಡಿಸುವ ಉದ್ದೇಶದಿಂದ ಮಾಟ ಮಂತ್ರ ಮಾಡಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಇತಿಹಾಸ ಮತ್ತು ಶಾಸನ ಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರು ಕೊಠಡಿಯನ್ನು ತಮ್ಮ ಅಳಿಯನಿಗೆ ಕೊಡಿಸುವ ಸಲುವಾಗಿ ಹಲವಾರು ಬಾರಿ ಜಾತಿನಿಂದನೆ ಮಾಡಿದ್ದಾರೆ ಎಂದು ಡಾ. ರಮಾ ಅವರು ಆರೋಪಿಸಿದ್ದಾರೆ ಹಾಗೂ ಈ ಹಿಂದೆ ಕೊಠಡಿಯ ವಿಚಾರವಾಗಿ ಜಗಳ ನಡೆದು ವಿದ್ಯಾರ್ಥಿಗಳ ಎದುರಲ್ಲೆ ಡಾ. ರಮಾ ಅವರ ಮೇಲ ಹಲ್ಲೆಯ ಯತ್ನವು ನಡೆದಿತ್ತು ಎಂದು ಆರೋಪಿಸಲಾಗಿದೆ. ಈ ಹಿನ್ನಲೆಯಲ್ಲಿ, ಡಾ. ರಮಾ ಅವರ ಕೊಠಡಿಯಲ್ಲಿ ನಡೆದ ಮಾಟ-ಮಂತ್ರದ ವಿರುದ್ಧ ಸಮಗ್ರ ತನಿಖೆ ನಡೆಸಿ, ಮಹಿಳಾ ಸಹಾಯಕ ಪ್ರಾಧ್ಯಾಪಕಿಯಾಗಿರುವ ಡಾ. ರಮಾ ಅವರಿಗೆ ನ್ಯಾಯ ಸಿಗುವಂತೆ ಕ್ರಮ ಕೈಗೊಳ್ಳುವ ಜೊತೆಗೆ ಅವರಿಗೆ ಕರ್ತವ್ಯದ ಸಮಯದಲ್ಲಿ ಸೂಕ್ತ ರಕ್ಷಣೆ ಒದಗಿಸಬೇಕೆಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಉತ್ತರ : -

ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗದಲ್ಲಿ ಅತಿಥಿ ಬೋಧನಾ ಸಹಾಯಕ ಪ್ರಾಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ರಮಾ ಜಿ. ಗೂಂಡುರಾವ ಇವರು ದಿನಾಂಕ: 29.11.2023ರವರೆಗೆ ವೈದ್ಯಕೀಯ ರಜೆಯನ್ನು ಮುಗಿಸಿಕೊಂಡು ದಿನಾಂಕ: 01.12.2023ರಂದು ಕರ್ತವ್ಯಕ್ಕೆ ಹಾಜರಾಗಿ ಕೊಠಡಿಯ ಬಾಗಿಲಿನ ಬೀಗ ತೆರೆದು ನೋಡಿದಾಗ ಕೊಠಡಿಯಲ್ಲಿ ಮಾಟ-ಮಂತ್ರ ಮಾಡಿಸಿದ ಗೊಂಬೆ, ಲಿಂಬೆಹಣ್ಣು, ಅರಿಶಿಣ-ಕುಂಕುಮ ಇರುವುದನ್ನು ಕಂಡು ದಿನಾಂಕ: 04.12.2023ರಂದು ಕುಲಪತಿಗಳಿಗೆ ದೂರನ್ನು ಸಲ್ಲಿಸಿರುತ್ತಾರೆ.

ಸದರಿ ದೂರಿನ ಕುರಿತು ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಜಿ. ಚಲವಾದಿ ಇವರಿಂದ ವಿವರಣೆಗಳನ್ನು ಪಡೆದು ಎರಡೂ ಪತ್ರಗಳಲ್ಲಿನ ಅಂಶಗಳ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವ ಸಂಬಂಧ ದಿನಾಂಕ: 08.12.2023ರಂದು ಪೋಲೀಸ್ ಠಾಣೆಗೆ ದೂರು ದಾಖಲಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ವಿಭಾಗದ ಸಹಾಯಕ ಕುಲಸಚಿವರನ್ನು ಎಲ್ಲಾ ದಾಖಲೆಗಳೊಂದಿಗೆ ನಿಯೋಜಿಸಲಾಗಿದ್ದು, ದೂರ ದಾಖಲಿಸುವ ಪ್ರಕ್ರಿಯೆ ಕೈಗೊಳ್ಳಲಾಗಿದೆ.

ಇಡಿ/56 /ಯುಕೆವಿ/2023

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು.